d) if so, and when the same will be paid ?

SRI V. L. PATIL (Minister for Revenue).--a) This land is proposed for acquisition.

b) Compensation is not paid, as the acpuisition is still under process.

c) On account of non completion of land Acquisition Proceedings.

d) Immediately after finalisation of the Land Acquisition Proceedings.

ಹಾಸನ ಜಿಲ್ಲೆಯಲ್ಲಿ ಸಹಕಾರಿ ನೂಲಿನ ಗಿರಣಿಯನ್ನು ಸ್ಥಾಪಿಸುವ ಬಗ್ಗೆ

(805) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ) ಮಾನ್ಯ ಸಹಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಜಿಲ್ಲೆಯಲ್ಲಿ ಸಹಕಾರಿ ನೂಲಿನ ಗಿರಣಿಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರದವರು ಅನುಮತಿ ಕೊಟ್ಟಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಯಾವಾಗ ಅನುಮತಿ ನೀಡಲಾಯಿತು ಮತ್ತು ಸದರೀ ಗಿರಣಿಯನ್ನು ಸ್ಥಾಪಿಸುವಲ್ಲಿ ಇಲ್ಲಿಯವರೆಗೆ ತಡವಾಗಿರುವುದಕ್ಕೆ ಕಾರಣವೇನು ?

ಇ) ಸದರೀ ಗಿರಣಿಯನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಪ್ರದೇಶವನ್ನು ತಂತ್ರಜ್ಞರು ಸೂಚಿಸಿರುವರೆ ಮತ್ತು ಹಾಗಿದ್ದಲ್ಲಿ ಆ ಪ್ರದೇಶವಾವುವು.

ಈ) ಹಾಗೆ ಸೂಚಿಸಿದಿದ್ದಲ್ಲಿ ಆದಕ್ಕೆ ಕಾರಣವೇನು.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಮಂತ್ರಿಗಳು).-

ಆ) ಆದರೆ ರಾಜ್ಯ ಸರ್ಕಾರ ಅನೌಪಚಾರಿಕವಾಗಿ ಮೈಸೂರು ಹಾಗೂ ಹಾಸನ ಜಿಲ್ಲೆಯ ಕ್ಷೇತ್ರಕ್ಕಾಗಿ ಅರಸೀಕೆರೆಯಲ್ಲಿ ನೇಕಾರರ ವಲಯದಲ್ಲಿ ಒಂದು ಸಹಕಾರಿ ನೂಲಿನಗಿರಣಿಯನ್ನು ಸ್ಥಾಪಿಸಲು ತೀರ್ಮಾನಿಸಿದೆ. ಈ ಹಂತದಲ್ಲಿ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಪ್ರಶ್ನೆ ಉಬ್ಬವಿಸುವುದಿಲ್ಲ.

ಅ) ಮೇಲಿನ ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉಬ್ಬವಿಸದು.

ಇ) ಇಲ್ಲ.

ಈ) ಈ ನೂತನ ನೂಲಿನ ಗಿರಣಿಗೆ ಪಾಲು ಬಂಡವಾಳದ ಸಂಗ್ರಹಣೆ ಆಗಿರದೆ ಗಿರಣಿಯನ್ನು ನೊಂದಾಯಿಸಿರುವುದಿಲ್ಲದಿರುವುದೇ ಕಾರಣ.

ಶ್ರೀ ಎಂ. ಮಹದೇವ್.—ಸ್ವಾಮಿ (ಅ) ಪ್ರಶ್ನೆಗೆ ಉತ್ತರವಾಗಿ, ಮಾನ್ಯ ಮಂತ್ರಿಗಳು ಮೈಸೂರು ಹಾಗೂ ಹಾಸನ ಜಿಲ್ಲೆಯ ಅರಸೀಕೆರೆಯ ನೇಕಾರರ ವಲಯದಲ್ಲಿ ಒಂದು ಸಹಕಾರಿ ನೂಲಿನ ಗಿರಣಿಯನ್ನು ಸ್ಥಾಪಿಸುವುದಕ್ಕೆ ಅನೌಪಚಾರಿಕವಾಗಿ ತೀರ್ಮಾನ ತೆಗೆದುಕೊಂಡಿದ್ದೇನೆಂದು ಹೇಳಿದ್ದಾರೆ. ಎರಡನೆಯದಾಗಿ ಈ ನೂತನ ನೂಲಿನ ಗಿರಣಿಗೆ ಪಾಲು ಬಂಡವಾಳದ ಸಂಗ್ರಹಣೆ ಆಗಿರದೆ ಗಿರಣಿಯನ್ನು ನೊಂದಾಯಿಸಿಲ್ಲದಿರುವುದೇ ಕಾರಣ ಎಂದು ಹೇಳಿದ್ದಾರೆ. ಇದನ್ನು ಅಧಿಕೃತವಾಗಿ ಯಾವಾಗ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ --ಅಧ್ಯಕ್ಷರೇ, ಗಿರಣಿ ಸ್ಥಾಪನೆ ಆಗಬೇಕಾದರೆ ಅಲ್ಲಿರತಕ್ಕವರು ಮುಂದೆ ಬರಬೇಕು. ಷೇರು ಮೊಬಲಗು ವಸೂಲ್ಮಾಡಬೇಕು. ರಿಜಿಸ್ಟರ್ ಮಾಡಿಸಬೇಕು, ಕೇಂದ್ರ ಸರ್ಕಾರದ ಅನುಮತಿ ಕೇಳಬೇಕು, ಜನ ಮುಂದೆ ಬರಬೇಕು. ಅರಸೀಕೆರೆ ಕಾಟನ್ ಸೊಸೈಟಿ ಸೂಪರಸೀಡ್ ಆಗಿದೆ. ಸೇರಿಸಿ ಎಂದು ಹೇಳಿದರೆ ಕಷ್ಟವಾಗುತ್ತದೆ.

ಶ್ರೀ ಎಂ. ಮಹದೇವ್. --ಸಚಿವರು ಅನೌಪಚಾರಿಕವಾಗಿ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅಧಿಕೃತವಾಗಿ ಯಾವಾಗ ಮಾಡುತ್ತೀರೆಂದು ತಿಳಿಸಿಲವಿರಾ ?

ಶ್ರೀ ಆರ್ ಎಲ್. ಜಾಲಪ್ಪ.--ಈಗಾಗಲೇ ತೀರ್ಮಾನವಾಗಿ 7--8 ವರ್ಷವಾಗಿದೆ. ಈಗ ಇದನ್ನು ಹುಡುಕಬೇಕಾದರೆ ಬಹಳ ಕಷ್ಟವಾಗಿದೆ.

ಕುಂದುಗೋಳ ತಾಲ್ಲೂಕಿನಲ್ಲಿ ಕೃಷಿಮೂರಾಟ ಸಮಿತಿಯಲ್ಲಿ ಸಿಮೆಂಟಿನ ದುರುಪಯೋಗ

325 (800) ಶ್ರೀ ಬಿ. ಜಿ. ಪಾಟೀಲ (ರಾಣಿಬೆನ್ನೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಗೋಳ ತಾಲ್ಲೂಕು ಒಕ್ಕಲು ತನ ಮಾರಾಟ ಸಮಿತಿ ಮಳಿಗೆಯಲ್ಲಿದ್ದ 1009 ಚೀಲ ಸಿಮೆಂಟ್ ನಿರುಪಯುಕ್ತವೆಂದು ಅಲ್ಲಿನ ಇಂಜಿನಿಯರ ಸರ್ಟಿಫಿಕೇಟ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಮೇಲಿನ ಸಮಿತಿಯ ಸಿಮೆಂಟ್ ದುರುಪಯೋಗವಾದ ಬಗ್ಗೆ ವಿಚಾರಣೆ ನಡೆಸಿ ಸಂಬಂಧಪಟ್ಟ ಇಲಾಖಾಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೆ ಗೊಳ್ಳುವಂತೆ ಮಾರಾಟ ಸಮಿತಿಯವರು ಶಿಫಾರಸ್ಸು ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ !

ಇ) ಹಾಗಿದ್ದಲ್ಲಿ ದುರುಪಯೋಗವಾದ ಸಿಮೆಂಟಿನ ಬೆಲೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲ್ಮಾಡಿ ಮೇಲಿನ ಸಮಿತಿಗೆ ಜಮಾ ಮಾಡುವ ಬಗ್ಗೆ ಹಾಗೂ ಅಪಾದನೆಗೊಳಗಾದ ಅಧಿಕಾರಿಯವರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

ಅ) ಹೌದು.

ಆ) ಇಲ್ಲ. ಸಮಿತಿಗೆ ಹಣಕಾಸಿನ ನಷ್ಟವನ್ನು ತಪ್ಪಿಸಲು ಈ ಸಿಮೆಂಟನ್ನು ನಾಶಪಡಿಸುವ ಬದಲು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲು ಸಮಿತಿಯು ಶಿಫಾರಸು ಮಾಡಿದೆ.

ಇ) ಬೆಳಗಾವಿ ವಿಭಾಗದ ಮಾರುಕಟ್ಟೆಗಳ ಜಂಟಿ ಮುಖ್ಯಾಧಿಕಾರಿಯವರಿಂದ ಈ ಬಗ್ಗೆ ವರದಿಯನ್ನು ಕೇಳಲಾಗಿದೆ. ಅವರಿಂದ ವರದಿ ಬಂದ ನಂತರ ಈ (ಕರ್ತವ್ಯ) ಲೋಪವ ಹೊಣೆಗಾರಿಕೆಯನ್ನು ಗೊತ್ತುಪಡಿಸಲು ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ ಅಂತಹವರ ಬಗ್ಗೆ ಕ್ರಮವನ್ನು ಕೂಡ ತೆಗದು ಕೊಳ್ಳಲಾಗುವುದು.

ಶ್ರೀ ಬಿ. ಜಿ. ಪಾಟೀಲ್.—ಸಿಮೆಂಟ್ ದುರುಪಯೋಗದ ಬಗ್ಗೆ ವಿಚಾರಣೆ ನಡೆಸಿ ಸಂಬಂಧಪಟ್ಟ ಇಲಾಖಾಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾರಾಟ ಸಮಿತಿಯವರು ಶಿಫಾರಸ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ, ಇಲ್ಲ ಎಂದು ಹೇಳಿದ್ದಾರೆ. ಹಾಗೆಯೇ ಸಮಿತಿಗೆ ಹಣಕಾಸಿನ ನಷ್ಟವನ್ನು ತಪ್ಪಿಸಲು ಈ ಸಿಮೆಂಟನ್ನು ನಾಶ ಪಡಿಸುವ ಬದಲು ಬಹಿರಂಗ ಹರಾಜಿನಮೂಲಕ ಮಾರಾಟ ಮಾಡಲು ಸಮಿತಿಯವರು ಶಿಫಾರಸ್ ಮಾಡಿದ್ದಾರೆಂದು ಹೇಳಿದಾರೆ ಆನಂತರ ದುರುಪಯೋಗವಾದ 1009 ಸಿಮೆಂಟ್ ಚೀಲಗಳ ನಷ್ಟವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲ್ಮಾಡಿ ಮೇಲಿನ ಸಮಿತಿಗೆ ಜಮಾ ಮಾಡಿ ಎಂದು ಕೇಳಿದ್ದಕ್ಕೆ ಬೆಳಗಾವಿ ವಿಭಾಗದ ಮಾರುಕಟ್ಟೆಗಳ ಜಂಟಿ ಮುಖ್ಯಾಧಿಕಾರಿಯವರಿಂದ ಈ ಬಗ್ಗೆ ವರದಿಯನ್ನು ಕೇಳಲಾಗಿದೆ, ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದಾರೆ. ಈ ಉತ್ತರ ಸರಿಯಾಗಿ ಕಾಣುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಇದು ದುರುಪಯೋಗವಲ್ಲ. ಬಹಳ ಕಾಲ ಇಟ್ಟು ಕೊಂಡಿದ್ದು ದರಿಂದ ಅದಕ್ಕೆ ಶಕ್ತಿ ಇಲ್ಲವೆಂದು ಅಲ್ಲಿನ ಇಂಜಿನಿಯರ್ ಅವರು ಸರ್ಟಿಫೈ ಮಾಡಿದ್ದಾರೆ. ನಮ್ಮ ಮಾರ್ಕೆಟಿಂಗ್ ಇಂಜಿನಿಯರ್ಸ್ ಅಲ್ಲಿ ಹೋಗಿದ್ದಾರೆ. ಅವರು ಸಿಮೆಂಟ್ ನೋಡಿ ಇದನ್ನು ಉಪಯೋಗಿಸಬೇಡಿ ಎಂದು ಹೇಳಿದ್ದಾರೆ. 1-8-83 ರಲ್ಲಿ ಇದನ್ನು ಪರೀಕ್ಷೆಗಾಗಿ ಕಳುಹಿಸಿದ್ದಾರೆ. 26-8-83 ರಲ್ಲಿ ಸ್ಯಾಂಪಲ್ ಕಳುಹಿಸಿ, ಇದನ್ನು ಉಪಯೋಗಿಸಬಾರದೆಂದು ಹೇಳಿದ್ದಾರೆ. 27-9-83 ಸಲ್ಲಿ ಇದರ ಫಲಿತಾಂಶ ಬಂದಿದೆ. ಇದರ ಗುಣಮಟ್ಟ ಬಹಳ ಕಡಿಮೆ ಇದೆಯೆಂದು ಹೇಳಿದ್ದಾರೆ. 15-12-83 ರಂದು ಚೀಫ್ ಮಾರ್ಕೆಟಿಂಗ್ ಆಫೀಸರ್ ಅವರು ಮಾರಾಟ ಮಾಡಲು ಅನುಮತಿ ಕೇಳಿದ್ದಾರೆ. ಜಂಟಿ ಚೀಫ್ ಮಾರ್ಕೆಟಿಂಗ್ ಆಫೀಸರ್ ಅವರಿಗೆ ಇದು ಉಪಯೋಗಕ್ಕೆ ಬರುವುದಿಲ್ಲ ಎನ್ನುವುದಾದರೆ ಮಾರಾಟ ಮಾಡಿ ಎಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಮಲ್ಲಾರಿಗೌಡ ಪಾಟೀಲ್.—ಗುಣಮಟ್ಟ ಸರಿಯಿಲ್ಲದೇ ಇರುವುದನ್ನು ಹರಾಜು ಮಾಡುವುದು ಸರಿಯೇ ? ಇದನ್ನು ಕೊಂಡುಕೊಳ್ಳುವುದಕ್ಕೆ ಯಾರು ಮುಂದೆ ಬರುತ್ತಾರೆ. ಇದನ್ನು ಯಾರಿಂದ ಕೊಂಡಿದ್ದೆ, ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಅಮ್ಮ ಸಂದ್ರದ ಮೈಸೂರು ಸಿಮೆಂಟ್ ಹಾಗೂ ಬಾಗಲಕೋಟೆಯ ಸಿಮೆಂಟನ್ನು ಟಿ.ಎ. ಪಿ. ಸಿ ಎಂ. ಎಸ್. ನಿಂದ ಕೊಟ್ಟಿದ್ದಾರೆ. ಇದನ್ನೆಲ್ಲಾ ಈಗ ವಾಪಸ್ ಕೊಟ್ಟಿದ್ದಾರೆ. ಬಹಳ ದಿನಸ ಕಳೆದರೆ ಸಿಮೆಂಟ್ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ತೇವಾಂಶವಾದರೂ ಕೂಡ ಅದು ಕೆಟ್ಟು ಹೋಗುತ್ತದೆ.

ಶ್ರೀ ದೊಡ್ಡ ಜೋರೇಗೌಡ.—ಅಧ್ಯಕ್ಷರೇ, ರಾಜ್ಯದಲ್ಲಿ ಸಿಮೆಂಟ್ ಅಭಾವ ಭಾರಿ ಪ್ರಮಾಣದಲ್ಲಿ

ಇದೆ. ಈ ರೀತಿ ಇರುವಾಗ ಇಷ್ಟು ಕಾಲ ಇಟ್ಟುಕೊಳ್ಳುವುದಕ್ಕೆ ಕಾರಣವೇನು ? ಇವತ್ತು ಕ್ವಾಲಿಟಿ ಚೆನ್ನಾಗಿಲ್ಲವೆಂದು ಮಾರಾಟ ಮಾಡಿ ಎಂದು ಚೀಫ್ ಮಾರ್ಕೆಟಿಂಗ್ ಆಫೀಸರ್ ಹೇಳುತ್ತಾರೆಂದು ಹೇಳುತ್ತಿದ್ದೀರಿ. ಜನಸಾಮಾನ್ಯರು ಇದನ್ನು ಬಳಸಿ, ಅವರ ಮನೆಗಳು ವಿರೂಪವಾಗಲಿ ಎನ್ನುವುದು ಸರ್ಕಾರದ ಉದ್ದೇಶವೇ ?

ಶ್ರೀ ಆರ್. ಎಲ್. ಜಾಲಪ್ಪ.--ಸಿಮೆಂಟ್ ಕೆಳಮಟ್ಟದಲ್ಲಿದೆಯೆಂದು ಹರಾಜು ಹಾಕಲಾಗಿದೆ. ಬೇಕಾದವರು ಕೊಂಡುಕೊಳ್ಳುತ್ತಾರೆ, ಬೇಡವಾದವರು ಬಿಡುತ್ತಾರೆ. ಯಾರ ತಲೆಯ ಮೇಲೂ ಒತ್ತಾಯ ಮಾಡಿ ಹಾಕುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.--ಇಂತಹ ಸಿಮೆಂಟನ್ನು ಕೊಂಡು ಉಪಯೋಗಿಸಿದವರ ಮನೆಗಳು ಗಂಗಾರಾಂ ಕಟ್ಟಡದ ತರಹ ಆಗಲಿ ಎಂದು ನಿಮ್ಮ ಅಭಿಪ್ರಾಯವೇ ? ಇದರಿಂದ ಜನರ ತಲೆ ಮೇಲೆ ಕಲ್ಲು ಚಪ್ಪಡಿ ಹಾಕಿದಂತಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ --ಈ ಸಿಮೆಂಟ್ ತೆಗೆದುಕೊಳ್ಳುವವರು, ಒಂದು ಚೀಲ ಉಪಯೋಗಿಸುವ ಕಡೆ ಎರಡು ಚೀಲವನ್ನೂ, ಎರಡು ಚೀಲ ಉಪಯೋಗಿಸುವ ಕಡೆ ನಾಲ್ಕು ಚೀಲವನ್ನೂ ಹೆಚ್ಚಿಗೆ ಬಳಸಿ ಕಟ್ಟಿಕೊಳ್ಳುತ್ತಾರೆ. ಆದುದರಿಂದ ಬೇಕಾದವರು ಕೊಂಡು ಕೊಳ್ಳಲಿ ಇಲ್ಲವೇ ಬಿಟ್ಟು ಬಿಡಲಿ.

ಶ್ರೀ ಎಂ. ಎಸ್. ಕೃಷ್ಣನ್.--ಅವರು ಹೇಳತಕ್ಕಂಥ ವಿಚಾರ ಬಹಳ ಗಮನಾರ್ಹವಾದ ವಿಷಯ. ಮೈಸೂರು ಸಿಮೆಂಟ್ ಬಗ್ಗೆ ಅನೇಕ ದೂರುಗಳು ಬರುತ್ತಿವೆ. ಇಂತಾದ್ದನ್ನು ಹರಾಜು ಹಾಕುತ್ತೇವೆಂದರೆ ಹೇಗೆ ?

ಶ್ರೀ ಆರ್. ಎಲ್. ಜಾಲಪ್ಪ --ಕ್ವಾಲಿಟಿ ಸರಿಯಿಲ್ಲವೆಂದು ತಿಳಿದು ಬಂದಿರುವುದರಿಂದ ಡಿಸ್ಪೋಸ್ ಮಾಡುವ ಬದಲು ಹರಾಜು ಮೂಲಕ ಮಾರಲು ಅನುಮತಿ ಕೇಳಿದ್ದಾರೆ. ಕ್ವಾಲಿಟಿ ಸರಿಯಿಲ್ಲವೆಂದು ಹೇಳಿ ಮಾರುತ್ತೇವೆ ಆದ್ದರಿಂದ ಬೇಕಾದವರು ಅದನ್ನು ಕೊಂಡುಕೊಳ್ಳುತ್ತಾರೆ.

[ಗೊಂದಲ]

ಶ್ರೀ ಹೆಬ್. ಡಿ. ಚೌಡಯ್ಯ.--ಮಾನ್ಯ ಮಂತ್ರಿಗಳು ಈ ಪವಿತ್ರವಾದಂತಹ ಸದನದಲ್ಲಿ ಆಗಲೇ ಉತ್ತರ ಕೊಟ್ಟಿದ್ದಾರೆ. ಕ್ವಾಲಿಟಿ ಬಗ್ಗೆ ಇಂದು ಉಪಯೋಗಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ನೀವು ಸರ್ಕಾರದ ಪರವಾಗಿ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಟಿಎಪಿಸಿಎಂಎಸ್,ಗೆ ಹರಾಜು ಹಾಕುವುದಕ್ಕೆ ಅವಕಾಶ ಕೊಡುತ್ತೀರಿ ಎಂದರೆ ಇದು ಹಗಲು ದರೋಡೆ ಇದ್ದಹಾಗೆ ಇದಕ್ಕೆ ಸರ್ಕಾರ ಪುರಸ್ಕಾರ ಕೊಡುತ್ತದೆಯೇ ?

ಶ್ರೀ ಆರ್. ಎಲ್. ಜಾಲಪ್ಪ.--ನಾವು ಮೋಸ ಮಾಡಿ ಹರಾಜು ಹಾಕುತ್ತಿಲ್ಲ. ಇದರ ಗುಣಮಟ್ಟ ಕಡಿಮೆ ಇದೆಯೆಂದು ಹೇಳಿ ಮಾರಾಟ ಮಾಡುತ್ತಿದ್ದೇನೆ. ಇಷ್ಟವುಳ್ಳವರು ತೆಗೆದುಕೊಳ್ಳಬಹುದು ಇಲ್ಲವೇ ಬಿಡಬಹುದು.

ಶ್ರೀ ಎಸ್. ಸೂರ್ಯನಾರಾಯಣರಾವ್.--ಇದನ್ನು ತೆಗೆದುಕೊಂಡು ಮನೆ ಕಟ್ಟಿ ಬಿಲ್ಡಿಂಗ್ ಬಿದ್ದು ಹೋದರೆ ಯಾರು ಜವಾಬ್ದಾರರು ? ಇದರ ಮಾರಾಟವನ್ನು ರದ್ದು ಮಾಡುತ್ತೇನೆಂದು ತಾವು ಹೇಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.--ಇದರಲ್ಲಿ ಗುಣಮಟ್ಟ ಕಡಿಮೆ ಇದೆಯೆಂದು ಹೇಳಿಯೇ ಮಾರುತ್ತಿದ್ದೇನೆ. ಬೇಕಾದವರು ತೆಗೆದುಕೊಳ್ಳುತ್ತಾರೆ, ಇಲ್ಲವೇ ಇದ್ದರೆ ಬಿಟ್ಟು ಬಿಡುತ್ತಾರೆ. ಇದರಲ್ಲಿ ಮೋಸ ಮಾಡುವುದು ಎಲ್ಲಿಂದ ಬಂತು ಎನ್ನುವುದು ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಪಂಪಾಪತಿ.--ಈ ಬಗ್ಗೆ ಅರ್ಧ ಗಂಟೆ ಕಾಲದ ಚರ್ಚೆಯಾಗಬೇಕು.

ಅಧ್ಯಕ್ಷರು--.ಈ ಬಗ್ಗೆ ತಾವು ಯಾರದಾರು ನೋಟೀಸ್ ಕೊಡಿ. ಚರ್ಚೆಗೆ ತೆಗೆದುಕೊಳ್ಳೋಣ. ನನಗೂ ಸಹ ಇದರ ಬಗ್ಗೆ ಆಸಕ್ತಿ ಇದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.--ಮಾನ್ಯ ಅಧ್ಯಕ್ಷರೇ, ಇಲ್ಲಿ ಉಪಪ್ರಶ್ನೆಗಳನ್ನು ಕೇಳಲು ಅವಕಾಶ ಸೀಮಿತವಾಗಿದೆ ಎಂಬುದು ನಮಗೂ ಗೊತ್ತಿದೆ.

ಅಧ್ಯಕ್ಷರು--. ತಾವು ಪ್ರಶ್ನೆ ಕೇಳಿ.

SRI M. VEERAPPA MOILY.--This is a matter of Principle ನಾವು ಪ್ರಶ್ನೆ ಕೇಳಿದಾಗ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಬೇಕಾಗುತ್ತದೆ.

inferior quality ಸಿಮೆಂಟನ್ನು ಸರಬರಾಜು ಮಾಡಿದವರ ಮೇಲೆ ಇವರು ಏನು ಕ್ರಮ ತೆಗೆದುಕೊಂಡಿದ್ದಾರೆ ? ಇಂತಹ ಸಿಮೆಂಟನ್ನು ಬಹಿರಂಗ ಮಾರುಕಟ್ಟೆಯಲ್ಲಿ ಮತ್ತೆ ಮಾರಾಟ ಮಾಡದರೆ. ಅದರಿಂದ ಏನು ಪ್ರಯೋಜದವಾಗುತ್ತದೆ ಇಂತಹ ಉಪಯುಕ್ತವಲ್ಲದ ಸಿಮೆಂಟನ್ನು ಸರ್ಕಾರದ **ಸೊಸೈಟಿ** ಗಳ ಮೂಲಕ ಮಾರಾಟ ಮಾಡಿದರೆ ಅದನ್ನು ಕೊಂಡ ಜನರಿಗೆ ತೊಂದರೆಯಾಗುವುದಿಲ್ಲವೇ ಇಂತಹ ವಿಚಾರದಲ್ಲಿ ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಇದಕ್ಕೆ ಈಗಲೇ ಮಾನ್ಯ ಮಂತ್ರಿಗಳು ಸಮರ್ಪಕವಾದ ಉತ್ತರ ಕೊಡಲು ಸಿದ್ಧರಿಲ್ಲದಿದರೆ ಸಾಕಷ್ಟು ಸಮಯ ತೆಗೆದುಕೊಂಡು ಜವಾದ್ದಾರಿಯಿಂದ ಉತ್ತರ ಕೊಡಬೇಕಾಗುತ್ತದೆ. ಅವರು ತಮ್ಮ ಜವಾದ್ದಾರಿಯಿಂದ ತಪ್ಪಿಸಿಕೊಳ್ಳಲು ತಾವು ಸಹಾಯ ನೀಡಬಾರದು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ?

ಶ್ರೀ ಎಂ. ಎಸ್. ಕೃಷ್ಣನ್.--ಮಾನ್ಯ ಅಧ್ಯಕ್ಷರೇ, ...

MR. SPEAKER --Should we dispense with question hour ?

ಶ್ರೀ ಎಂ ಎಸ್. ಕೃಷ್ಣನ್.--ತಮ್ಮ ಮಾತಿಗೆ ನಾವು ಬೆಲೆ ಕೊಡುತ್ತೇವೆ, ಆದರೆ ಇಲ್ಲಿ ಇಂತಹ ಗಹನವಾದ ಪ್ರಶ್ನೆಗಳಿಗೆ ಮಂತ್ರಿಗಳು ಉತ್ತರ ಕೊಡುವಾಗ ಬಹಳ ಎಚ್ಚರಿಕೆಯಿಂದ ಉತ್ತರ ಕೊಡಬೇಕಾಗುತ್ತದೆ. ಕಡಿಮೆ ದರ್ಜೆಯ ಸಿಮೆಂಟನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರೆ ಇದಕ್ಕೆ ಸರ್ಕಾರವೇ ಸಹಾಯ ಮತ್ತು ಪ್ರೋತ್ಸಾಹ ನೀಡಿದಂತೆ ಆಗುವುದಿಲ್ಲವೇ ? ಆದರಿಂದ ನಾವು ಇಂತಹ ಅಭಿಪ್ರಾಯಕ್ಕೆ ಬರಲು ಅವಕಾಶ ಕೊಡದೆ ಮಾನ್ಯ ಮಂತ್ರಿಗಳು ಇದನ್ನು ಮತ್ತೆ ಪರಿಶೀಲನೆ ಮಾಡುತ್ತೇನೆಂದು ಹೇಳಲಿ.

ಶ್ರೀ ಎಂ ಮಹದೇವ್.--ಈ ಬಗ್ಗೆ ಸರಿಯಾದ ತನಿಖೆಯಾಗಬೇಕು.

ಶ್ರೀ ಎಸ್. ಸೂರ್ಯನಾರಾಯಣರಾವ್.--ಕಡಿಮೆ ಬೆಲೆಗೆ ಈ ಸಿಮೆಂಟ್‌ನ್ನು ಒಂದು ವೇಳೆ ಮಾರಾಟ ಮಾಡಿದರೆ ಹಳ್ಳಿಯ ಜನರು ಮೋಸ ಹೋಗುತ್ತಾರೆ.

ಶ್ರೀ ಆರ್.ಎಲ್. ಜಾಲಪ್ಪ.--ಮಾನ್ಯ ಅಧ್ಯಕ್ಷರೇ, ಕುಂದಗೋಳ ತಾಲ್ಲೂಕ್ ಒಕ್ಕಲುತನ ಮಾರಾಟ ಸಮಿತಿಯವರು ಸ್ವಂತ ಗೋಡೌನ್ ಕಟ್ಟಿಸಲು ಈ ಸಿಮೆಂಟನ್ನು ಕೊಂಡಿದ್ದಾರೆಯೇ ಹೊರತು ಬೇರೆಯವರಿಗೆ ಮಾರಾಟ ಮಾಡುವುದಕ್ಕಲ್ಲ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಈ ಸಮಿತಿಯವರು ತಾ : 27-7-1979ರಲ್ಲಿ 57 ಮೆಟ್ರಿಕ್ ಟನ್ ಸಿಮೆಂಟ್‌ನ್ನು ನೆ.ಸೂರು ಸಿಮೆಂಟ್ಸ್ ಕಛೇರಿಯಿಂದ ತೆಗೆದುಕೊಂಡಿದ್ದಾರೆ. ಅದೇರೀತಿ ತಾ : 11-6-1979ರಲ್ಲಿ 19 ಟನ್ ಸಿಮೆಂಟನ್ನು ತಾ : 11-1-1980 ರಲ್ಲಿ 18.6 ಟನ್ ಸಿಮೆಂಟನ್ನು, ತಾ : 8-5-1980ರಲ್ಲಿ 24 ಟನ್ ಸಿಮೆಂಟ್‌ನ್ನು, ತಾ : 9-8-1980 ರಲ್ಲಿ 38 ಟನ್ ಸಿಮೆಂಟ್‌ನ್ನು ಖರೀದಿ ಮಾಡಿದ್ದಾರೆ ತಾ : 26-11-1982ರಲ್ಲಿ 37.2 ಟನ್ ಸಿಮೆಂಟ್‌ನ್ನು ಬಾಗಲಕೋಟೆ ಸಿಮೆಂಟ್ ಕಂಪನಿಯಿಂದ ತೆಗೆದುಕೊಂಡಿದ್ದಾರೆ. ಅಮೇಲೆ ತಾ : 1-5-1980 ರಲ್ಲಿ ನೂರು ಟನ್ ಸಿಮೆಂಟ್‌ನ್ನು ಖರೀದಿ ಮಾಡಿದ್ದಾರೆ. ಅನಂತರ ತಾ : 1-7-1980ರಲ್ಲಿ ...

(ಗೊಂದಲ)

ಶ್ರೀ ಪಿ ರಾಮದೇವ್.--ನಮಗೆ ಈ ವಿವರಗಳೆಲ್ಲಾ ಬೇಡ. ಅಲ್ಲಿರುವಂತಹ ನಿರುಪಯುಕ್ತವಾದ ಸಿಮೆಂಟ್ ದುರುಪಯೋಗವಾಗದಂತೆ ತಡೆಗಟ್ಟುವುದು ನಮಗೆ ಬೇಕಾಗಿರುವುದು. ಈ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಆರ್. ಎಲ್. ಜಾಲಪ್ಪ ಈ ಸಿಮೆಂಟನ್ನು ಬಹಳ ಕಾಲ ಸ್ಟಾಕ್ ಇಟ್ಟಿದ್ದರಿಂದ ಅದು ಉಪಯೋಗಿಸಲು ನಿರುಪಯುಕ್ತವಾಗಿದೆ ಎಂದು ಅಲ್ಲಿನ ಇಂಜಿನಿಯರ್ ಅವರು ಸಲಹೆ ಮಾಡಿದರಿಂದ ಅದರ ಕ್ವಾಲಿಟಿ ಯಾವ ರೀತಿ ಇದೆ ಎಂಬುದನ್ನು ಪರೀಕ್ಷೆ ಮಾಡಿಸಲು ಟೆಸ್ಟಿಂಗ್ ಇಂಜಿನಿಯರಿಂಗ್ ಕಂಪನಿಯವರಿಗೆ ಕಳುಹಿಸಿಕೊಟ್ಟಿದ್ದರು. ಅವರು ಟೆಸ್ಟ್ ಮಾಡಿದ ಮೇಲೆ ಇದನ್ನು ಉಪಯೋಗಿಸಿಸುವುದು ಬೇಡ ಎಂದು ಸಲಹೆ ಮಾಡಿದ್ದಾರೆ. ಇದರ ನಂತರ ಇದನ್ನು ನಾಶಪಡಿಸುವಬದಲು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡುವ ಬಗ್ಗೆ ಸರ್ಕಾರದ ಅಭಿಪ್ರಾಯ ಕೇಳಿದ್ದಾರೆ. ಆದರೆ ಮಾನ್ಯ ಸದಸ್ಯರು ಇದನ್ನು ಮಾರಾಟ ಮಾಡುವುದು ಬೇಡ ನಾಶಪಡಿಸಬೇಕೆಂದು ಸಲಹೆ ಮಾಡಿದ್ದಾರೆ. ಈ ಬಗ್ಗೆ ತನಿಖೆ ಮಾಡಲು ನಾವು ಅಲ್ಲಿಗೆ ಜಿಲ್ಲಾ ಮಾರ್ಕೆಟಿಂಗ್ ಅಧಿಕಾರಿ ಅವರನ್ನು ಕಳುಹಿಸಿಕೊಟ್ಟಿದ್ದೇವೆ. ಅವರ ವರದಿ ಬಂದ ನಂತರ ಅವರ ಕ್ವಾಲಿಟಿ ಹಾಗೂ ವರ್ಸೆಂಟೇಜ್ ಯಾವ ರೀತಿ ಇದೆ ಎಂಬುದನ್ನು ನೋಡಿದ ನಂತರ ನಾಶ ಮಾಡುವುದಿದ್ದರೆ ಮಾಡೋಣ.

ಶ್ರೀ ಎಸ್. ಸೂರ್ಯನಾರಾಯಣರಾವ್.--ಒಂದು ವೇಳೆ ಇದನ್ನು ಅವರು ಮಾರಾಟ ಮಾಡಿದರೆ ಅದನ್ನು ಕೊಂಡ ಬಡ ಜನರಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲವೇ ?

ಶ್ರೀ ಆರ್. ಎಲ್. ಜಾಲಪ್ಪ --ಇದಕ್ಕೆ ಹಣವನ್ನು ಕುಂದಗೋಳ ಎ.ಪಿ.ಎಂ.ಸಿ. ಅವರು ಕೊಟ್ಟಿದ್ದಾರೆ. ಆದ್ದರಿಂದ ಅವರು ಹರಾಜಿನ ಮೂಲಕ ಮಾರಾಟ ಮಾಡಲು ಸರ್ಕಾರ ಅನುಮತಿ ಕೇಳಿದ್ದಾರೆ.

[ಗೊಂದಲ]

ಅಧ್ಯಕ್ಷರು --ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಈಗಾಗಲೇ 15 ನಿಮಿಷಗಳಿಗೂ ಹೆಚ್ಚು ಕಾಲ ತಾವುಗಳು ಉಪ ಪ್ರಶ್ನೆಗಳನ್ನು ಕೇಳಲು ತೆಗೆದುಕೊಂಡಿರುವುದರಿಂದ ಇನ್ನು ಯಾರಿಗೂ ಉಪಪ್ರಶ್ನೆ ಕೇಳಲು ಅವಕಾಶ ಕೊಡುವುದಿಲ್ಲ. ಅವರು ಇನ್ನೂ ಆ ಸಿಮೆಂಟನ್ನು ಮಾರಾಟ ಮಾಡಿಲ್ಲ ಅವರೂ ಅನುಮತಿ ಕೊಟ್ಟಿದ್ದಾರೆಂದು ತಾವು ತಿಳಿದು ಕೊಂಡಿದ್ದೀರಿ. ಆದರೆ ಅದು ಸರಿಯಲ್ಲ, ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಈಗ ಮುಂದಿನ ಪ್ರಶ್ನೆಗೆ ಹೋಗೋಣ

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.--ನಾವು ಯಾರಿಗೆ ಮೋಸ ಮಾಡಿದ್ದೇವೆಂದು ಮಾನ್ಯ ನಾಯಕ್ ಅವರು ಆ ರೀತಿ ಸಿಕ್ಕಾಪಟ್ಟೆ ಮಾತನಾಡುತ್ತಿದ್ದಾರೋ ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು --ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ --ಮಾನ್ಯ ಮಂತ್ರಿಗಳು ಸಹಾ ಮೆಂಬರ್ ತರಹವೇ ಮಾತನಾಡುತ್ತಾರೆ.

ಸಹಕಾರಿ ಗೃಹ ನಿರ್ಮಾಣ ಸಂಘದವರು ನಿವೇಶನಗಳನ್ನು ನೋಂದಾಯಿಸಿಕೊಳ್ಳುವ ಸಮಯದಲ್ಲಿ ಸ್ಟ್ಯಾಂಪು ಶುಲ್ಕದ ವಿನಾಯಿತಿ

326 (842) ಶ್ರೀಮತಿ ನಾಗರತ್ನಮ್ಮ (ಗುಂಡ್ಲುಪೇಟೆ).--ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸಹಕಾರ ಗೃಹ ನಿರ್ಮಾಣ ಸಂಘಗಳ ರಾಜ್ಯ ಸಮುದಾಯ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳು ವಾಗ್ದಾನ ಮಾಡಿದಂತೆ ಸಹಕಾರಿ ಗೃಹ ನಿರ್ಮಾಣ ಸಂಘಗಳು ನಿವೇಶನಗಳ ನೋಂದಣಿಗೆ ಇರುವ ಮುದ್ರಾಂಕ ಶುಲ್ಕದ ವಿನಾಯಿತಿ ಪೂರ್ವಸ್ಥಿತಿಗೆ ತರುವ ಸೂಚನೆ ಸರಕಾರದ ಮುಂದೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಪರಿಪಾಲನಾ ಆಶ್ವಾಸನೇ ಯಾವ ಹಂತದಲ್ಲಿ ಬಾಕಿ ಇದೆ ;

ಇ) ಈ ಬಗ್ಗೆ ಸದ್ಯದ ಅಧಿವೇಶನದಲ್ಲಿ ಯಾವುದಾದರೂ ತಿದ್ದುಪಡಿ ಅನುಮೋದನೆಗೆ ಸದನದ ಮುಂದೆ ತರುವ ಸೂಚನೆ ಇದೆಯೇ ?

ಶ್ರೀ ವಿ. ಎಸ್. ಪಾಟೀಲ್ (ಕಂದಾಯ ಮಂತ್ರಿಗಳು).--

ಅ) ನೋಂದಣಿಸುವ ಪತ್ರ ಸೊಸೈಟಿಯದಾಗಲಿ ಅಥವಾ ಅಧಿಕಾರಿಯದಾಗಲಿ ಅಥವಾ ಆಪತ್ಕ ಸದಸ್ಯನದಾಗಲಿ, ಆದರಲ್ಲಿ ತೋರಿಸಿರುವ ಕ್ರಮ್ಯತ್ತು ರೂ. 8,000 ಕ್ಕಿಂತ ಕಡಿಮೆ ಇಷ್ಟಲ್ಲಿ ಅದರ ಮೇಲೆ ಪೂರ್ಣವಾಗಿ ನೋಂದಣಿ ಶುಲ್ಕವನ್ನು ಮಾಫಿ ಮಾಡಲಾಗಿದೆ.

ಆ) 'ಅ'ಕ್ಕೆ ಕೊಟ್ಟರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 'ಅ'ಕ್ಕೆ ಕೊಟ್ಟರುವ ಉತ್ತರದಿರದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.--ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ಸಹಕಾರ ಗೃಹ ನಿರ್ಮಾಣ ಸಂಘಗಳ ರಾಜ್ಯ ಸಮುದಾಯ ಸಮ್ಮೇಳನದಲ್ಲಿ ಈ ಬಗ್ಗೆ ವಾಗ್ದಾನ ಮಾಡಿದ್ದರು. ಆ ವಾಗ್ದಾನದ ಪ್ರಕಾರ ಏನಾದರೂ ಈ ನೋಂದಣಿ ಶುಲ್ಕವನ್ನು ಮಾಫಿ ಮಾಡಲಾಗಿದೆಯೇ ? ಮಾಡಿದ್ದರೆ ಯಾವ ತಾರೀಖಿನಿಂದ ಮಾಡಲಾಗಿದೆ ? 4 ತಿಂಗಳಿಂದೀಚೆಗೆ ಏನಾದರು ಇದನ್ನು ಜಾರಿಗೆ ಕೊಡಲಾಗಿದೆಯೇ ಹೇಗೆ ? ಮುನಿಸಿಪಲ್ ಕಾರ್ಪೊರೇಷನ್, ಮುನಿಸಿಪಾಲಿಟಿ ಹೌಸಿಂಗ್ ಬೋರ್ಡ್ ಇವರೆಲ್ಲರಿಗೂ ಮಾರ್ಕೆಟ್ ವ್ಯಾಲ್ಯೂ ಮೇಲೆ ರಿಜಿಸ್ಟ್ರೇಷನ್ ಮಾಡಿಸಲು ಅನುಕೂಲ ವಿದೆ. ಆದರೆ ಈ ಸೊಸೈಟಿಗಳಿಗೆ ತಾವು ಏನಾದರೂ ರಿಯಾಯಿತಿ ಕೊಟ್ಟಿದ್ದೀರಾ ? ಕೆಲವು ಸಲ ಸಬ್ ರಿಜಿಸ್ಟ್ರಾರ್ ಅವರು ಒಪ್ಪಿಕೊಂಡರೂ ಸಹ ಮುಂದೆ ವಿಶೇಷ ಜಿಲ್ಲಾಧಿಕಾರಿಯವರು ಕಡಿಮೆ ಬೆಲೆಗೆ ರಿಜಿಸ್ಟ್ರೇಷನ್ ಮಾಡಿಸಲಾಗಿದೆ ಎಂದು ತೊಂದರೆ ಕೊಡುತ್ತಾರೆ ಆದ್ದರಿಂದ ಇಷ್ಟಕ್ಕೇ ರಿಜಿಸ್ಟ್ರೇಷನ್ ಮಾಡಿಸಬಹುದೆಂದು ತಾವು ಡೈರೆಕ್ಷನ್